ಸರ್ಕಾರಿ ಕಾಲೇಜುಗಳಲ್ಲಿ ಬೋಧನಾ ಗುಣಮಟ್ಟದ ಸುಧಾರಣೆ

1399(619); ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಅ) ರಾಜ್ಯದಲ್ಲಿರುವ ಸರಕಾರಿ ಕಾಲೇಜುಗಳ ಜಿಲ್ಲಾವಾರು ಸಂಖ್ಯೆ ಮತ್ತು ಅವುಗಳಲ್ಲಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ/ ವಿದ್ಯಾರ್ಥಿನಿಯ ಸಂಖ್ಯಾ ವಿವರಗಳನ್ನು ಒದಗಿಸುವುದು;

ಆ) ಸದರಿ ಕಾಲೇಜುಗಳಲ್ಲಿ ಕೊರತೆ ಇರುವ ಬೋಧನಾ ಸಿಬ್ಬಂದಿಗಳ ಸಂಖ್ಯೆ ಹಾಗೂ ಅವುಗಳನ್ನು ಭರ್ತಿಗೊಳಿಸಲು ಹಾಗೂ ಬೋಧನಾ ಗುಣಮಟ್ಟದ ಸುಧಾರಣೆಗಾಗಿ ರೂಪಿಸಿರುವ ಕ್ರಮಗಳೇನು;

ಇ) ಕಾಲೇಜು ಶಿಕ್ಷಣ ಇಲಾಖೆಯ ವಿಷಯ ಪರಿಣಿತರ ಸಮಿತಿಯನ್ನು ರಚಿಸಿದ್ದಲ್ಲಿ, ಈ ಕುರಿತಾದ ವಿವರಗಳು ಹಾಗೂ ಸಮಿತಿಯ ಕಾರ್ಯ ವ್ಯಾಪ್ತಿ ಮತ್ತು ಜಿಲ್ಲಾಬ್ದಾರಿ ಮತ್ತು ಹೊಣೆಗಾರಿಕೆಗಳೇನು?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ವಿವರ ಅನುಬಂಧ–01 ರಲ್ಲಿ ಲಗತ್ತಿಸಿದೆ.

ಆ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಮಂಜೂರಾದ ಹುದ್ದೆಗಳಲ್ಲಿ ಖಾಲಿಯಿರುವ 1604 ಬೋಧಕ ಹುದ್ದೆಗಳಲ್ಲಿ ಅಗತ್ಯ ಕಾರ್ಯಭಾರವಿರುವ ವಿಷಯಗಳಲ್ಲಿ 1298 ಉಪನ್ಯಾಸಕರ/ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಸಾಮಾನ್ಯ ಪ್ರವೇಶ ಪರೀಕ್ಷೆಯ ಮೂಲಕ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಕಾಲೇಜುಗಳಲ್ಲಿ ಶೈಕ್ಷಣಿಕ/ಬೋಧನಾ ಗುಣಮಟ್ಟವನ್ನು ವೃದ್ಧಿಸುವ ಸಂಬಂಧ ರಾಜ್ಯಮಟ್ಟದ ವಿಶೇಷ ಪರಿಣಿತರ ಸಮಿತಿ ರಚಿಸಲಾಗಿದೆ.

ಸದರಿ ವಿಷಯ ಪರಿಣಿತರ ಸಮಿತಿಯ ನಿರ್ವಹಿಸುವ ವಿಷಯಗಳು ಈ ಕೆಳಕಂಡಂತಿರುತ್ತದೆ.

1. ಬೋಧನೆಯಲ್ಲಿ ಅಳವಡಿಸಬಹುದಾದ ಬೋಧನಾ ಕ್ರಮಗಳ ಬಗ್ಗೆ ನವೀನ ಮಾದರಿಯ ಕೌಶಲ್ಯದ ಬಗ್ಗೆ ತಿಳಿಹೇಳುವುದು.

2. ವಿವಿಧ ವಿಷಯಗಳ ಪಠ್ಯಾಧಾರಿತದಲ್ಲಿ (e-content) ಅಭಿವೃದ್ಧಿಪಡಿಸುವುದು.

3. ಅಧ್ಯಾಪಕರು ಸಂಶೋಧನೆಗಳನ್ನು ನಡೆಸಲು ಅಗತ್ಯ ಮಾಹಿತಿ ನೀಡುವುದು.

4. ಪ್ರಶ್ನೆ ಕೋಶ (Question Bank) ತಯಾರಿಕೆ ಬಗ್ಗೆ ಮಾರ್ಗದರ್ಶನ ನೀಡುವುದು.

5. ನುರಿತ ಅಧ್ಯಾಪಕರುಗಳಿಂದ ವಿಷಯವಾರು ಬೋಧನೆಯನ್ನು ಇಲಾಖಾ ವತಿಯಿಂದ ವಿಡಿಯೋ ಚಿತ್ರೀಕರಣ ಮಾಡಿ, ಎಲ್ಲಾ ಕಾಲೇಜುಗಳಿಗೆ ಸಿ.ಡಿ ಮುಖಾಂತರ ವಿತರಣೆ ಮಾಡುವುದು ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ಕ್ರಮವಹಿಸುವುದು.

6. ಸರ್ಕಾರಿ ಪದವಿ ಕಾಲೇಜುಗಳ ಬೋಧಕರ ಬೋಧನೆಯ ಮಟ್ಟವನ್ನು ಮೌಲ್ಯಮಾಪನ ಮಾಡಲು ಕ್ರಮಕೈಗೊಳ್ಳುವುದು.

ಅನುಬಂಧ -I

ಕಾಲೇಜು ಶಿಕ್ಷಣ ಇಲಾಖೆ

2014-15ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ವಿವರ

ಕ್ರ ಸಂ	ಜಿಲ್ಲೆಯ ಹೆಸರು	ಕಾಲೇಜುಗಳ ಸಂಖ್ಯೆ	ವಿದ್ಯಾರ್ಥಿಗಳು	ವಿದ್ಯಾರ್ಥಿನಿಯರು	ಒಟ್ಟು
1	ಬೆಂಗಳೂರು ನಗರ	21	10588	14076	24664
2	ಬೆಂಗಳೂರು ಗ್ರಾಮಾಂತರ ಜಿಲ್ಲೆ	8	2780	2665	5445
3	ರಾಮನಗರ ಜಿಲ್ಲೆ	11	2978	4283	7261
4	ತುಮಕೂರು ಜಿಲ್ಲೆ	20	9013	11742	20755
5	ಚಿಕ್ಕಬಳ್ಳಾಪುರ ಜಿಲ್ಲೆ	9	4485	5002	9487
6	ಕೋಲಾರ ಜಿಲ್ಲೆ	9	4983	7013	11996
7	ಮೈಸೂರು ಜಿಲ್ಲೆ	23	7447	13938	21385
8	ಚಾಮರಾಜನಗರ ಜಿಲ್ಲೆ	9	2863	1487	4350
9	ಮಂಡ್ಯ ಜಿಲ್ಲೆ	15	3864	7488	11352
10	ಹಾಸನ ಜಿಲ್ಲೆ	27	5655	8721	14376
11	ಶಿವಮೊಗ್ಗ ಜಿಲ್ಲೆ	16	5545	9373	14918
12	ಚಿತ್ರದುರ್ಗ ಜಿಲ್ಲೆ	14	5506	5231	10737
13	ದಾವಣಗೆರೆ ಜಿಲ್ಲೆ	11	5782	6673	12455
14	ಚಿಕ್ಕಮಗಳೂರು ಜಿಲ್ಲೆ	14	5273	6278	11551
15	ದಕ್ಷಿಣ ಕನ್ನಡ ಜಿಲ್ಲೆ	19	2865	6748	9613

16	ಉಡುಪಿ ಜಿಲ್ಲೆ	12	3247	6632	9879
17	ಕೊಡಗು ಜಿಲ್ಲೆ	6	1203	1277	2480
18	ಧಾರವಾಡ ಜಿಲ್ಲೆ	9	2377	2405	4782
19	ಗದಗ್ ಜಿಲ್ಲೆ	10	2218	2448	4666
20	ಹಾವೇರಿ ಜಿಲ್ಲೆ	13	3571	3513	7084
21	ಉತ್ತರ ಕನ್ನಡ ಜಿಲ್ಲೆ	15	4737	8223	12960
22	ಬೆಳಗಾವಿ ಜಿಲ್ಲೆ	21	5680	4508	10188
23	ಬಾಗಲಕೋಟೆ ಜಿಲ್ಲೆ	16	2657	3068	5725
24	ವಿಜಾಪುರ ಜಿಲ್ಲೆ	11	3304	1699	5003
25	ಗುಲ್ಬರ್ಗ ಜಿಲ್ಲೆ	16	4604	5221	9825
26	ಯಾದಗಿರಿ ಜಿಲ್ಲೆ	7	3422	2144	5566
27	ರಾಯಚೂರು ಜಿಲ್ಲೆ	12	4928	2653	7581
28	ಕೊಪ್ಪಳ ಜಿಲ್ಲೆ	14	2727	2024	4751
29	ಬಳ್ಳಾರಿ ಜಿಲ್ಲೆ	14	5195	4134	9329
30	ಬೀದರ್ ಜಿಲ್ಲೆ	9	2197	2436	4633
ಒಟ್ಟು		411	131694	163103	294797